ನಂಜನಗೂಡು ಪಟ್ಟಣದ ಒಳಚರಂಡಿ ಯೋಜನೆಯ ಬಗ್ಗೆ :

೩೬೫. ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡಿನಲ್ಲಿ ಒಳಚರಂಡಿ ನಿರ್ಮಾಣ ಕಾರ್ಯ ಮಾಡಲು ಮಂಜೂರಾಗಿದೆಯೆ ಅಥವಾ ಅಲ್ಪ ವೆಚ್ಚದ ಶೌಚಾಲಯ ಯೋಜನೆ ಮಂಜೂರಾಗಿದೆಯೆ,

ಆ) ಮಂಜೂರಾಗಿದ್ದರೆ ಅದರ ಅಂದಾಜು ವೆಚ್ಚವೆಷ್ಟು ?

ಇ) ಹಾಗಿಲ್ಲದಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಅಲ್ಪ ವೆಚ್ಚದ ಶೌಚಾಲಯ ಯೋಜನೆ ಮಂಜೂರಾಗಿದೆ

ಆ) ೭,೨೬,೯೩೬,೦೦ ರೂ.ಗಳು

ಇ) ಉದ್ಭವಿಸುವುದಿಲ್ಲ.

ಹುಡ್ಕೋ ಜನತಾ ಮನೆಗಳ ಸಾಲ ಮನ್ನಾ ಮಾಡುವ ಬಗ್ಗೆ

೩೬೬. ಶ್ರೀ ಕೆ. ಕುಶಾಲ. (ಸೂಳ್ಯ).—ಮಾನ್ಯ ವಸತಿ ಇಲಾಖೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೆಲವು ವರ್ಷಗಳ ಹಿಂದಿನಿಂದ ವೀಡಿದ ಹುಡ್ಕೋ ಜನತಾ ಮನೆಗಳ ಫಲಾನುಭವಿಗಳ ಸಾಲದ ಕಂತನ್ನು ಈ ತನಕ ವಸೂಲಿ ಮಾಡದೆ ಈಗ ಸಾಲ ವಸೂಲಿ ಆರಂಭಿಸಿರುವುದು ಸರ್ಕಾರದವರ ಗಮನದಲ್ಲಿದೆಯೇ ?

ಆ) ಈ ತುರ್ತು ಕ್ರಮದಿಂದ ಬಡ ಫಲಾನುಭವಿಗಳ ಸಾಲಗಳನ್ನು ಏಕ ಗಂಟಿನಿಂದ ದೊಡ್ಡ ಮೊತ್ತದಲ್ಲಿ ಮರುಪಾವತಿ ಮಾಡಬೇಕಾಗಿ ಬಂದಿರುವುದು ಸರ್ಕಾರದ ಗಮನದಲ್ಲಿದೆಯೇ ?

ಇ) ಹಾಗಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಫಲಾನುಭವಿಗಳಿಗೆ ಸಾಲ ಮನ್ನಾ ಮಾಡಲು ಕ್ರಮ ಕೈ ಗೊಳ್ಳುವರೇ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್, (ವಸತಿ ಇಲಾಖೆ ರಾಜ್ಯ ಸಚಿವರು). —

ಅ) ಈ ಯೋಜನೆಯಡಿಯಲ್ಲಿ ಸಾಲವನ್ನು ಫಲಾನುಭವಿಗಳಿಂದ ಇಪ್ಪತ್ತು ವರ್ಷಗಳಲ್ಲಿ ವಸೂಲಿ ಮಾಡಬೇಕಾಗಿರುತ್ತದೆ. ಆದರೆ ಈವರೆಗಿನ ಸಾಲ ವಸೂಲಿಯು ತೃಪ್ತಿಕರವಾಗಿರಲಿಲ್ಲವಾದ್ದರಿಂದ ಸದರಿ ಸಾಲ ವಸೂಲಿಯನ್ನು ಹೆಚ್ಚಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ಕಾರವು ನಿರ್ದೇಶನವನ್ನು ನೀಡಿರುತ್ತದೆ.

ಆ) – ಇಲ್ಲ –

ಇ) – ಉದ್ಭವಿಸುವುದಿಲ್ಲ –

ಮಂಡಲ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆ

೩೬೭. ಶ್ರೀ ಗೋಪಾಲ ಮಂಕಿಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಮಂಡಲ ಪಂಚಾಯತಿಗಳೆಷ್ಟು ?

ಆ) ಮಂಡಲ ಪಂಚಾಯತಿ ಕಾರ್ಯದರ್ಶಿಗಳ ಒಟ್ಟು ಹುದ್ದೆಗಳೆಷ್ಟು ?

ಇ) ಭರ್ತಿ ಮಾಡದೆ ಇರುವ ಕಾರ್ಯದರ್ಶಿಗಳ ಹುದ್ದೆಗಳ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ. ರಾಜ್ ಮಂತ್ರಿಗಳು).—

ಅ) ೨,೪೬೯

ಆ) ೨,೪೬೯

ಇ) ೪೦

ಹುಲ್ಲ ಹಳ್ಳಿಗೆ ಕುಡಿಯಲಿಂವ ನೀರಿನ ಕೊರತೆ

೩೬೬ ಶ್ರೀ ಟಿ ಡಿ. ಜಯಕುಮಾರ.—(ನಂಜನಗೂಡು) ಮಾನ್ಯ ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿಗೆ ಕುಡಿಯಲಿಂವ ನೀರಿನ ಕೊರತೆ ನೀಗಲು ಏನಾದರೂ ಹೊಸ ಯೋಜನೆ ಮಂಜೂರಾಗಿದೆಯೆ ?

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚವೆಷ್ಟು ?

ಇ) ಮಂಜೂರು ಆಗದಿದ್ದರೆ ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್. (ಗ್ರಾಮಿಣಾ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಹಳ್ಳಿಗೆ ಈಗಾಗಲೇ ನಳದ ನೀರಿನ ಸರಬರಾಜು ಯೋಜನೆ ಇರುವುದರಿಂದ ಇನ್ನೊಂದು ಹೊಸ ಯೋಜನೆ ಮಂಜೂರು ಮಾಡುವ ಅಗತ್ಯ ಇಲ್ಲ. ?

ಜಿಲ್ಲಾ ಪರಿಷತ್ ಸದಸ್ಯರಿಗೆ ಗೌರವ ಧನ

೬೪೪ ಶ್ರೀ ಕೆ. ಕುಶಾಲ, (ಸುಳ್ಯ).—ಮಾನ್ಯ ಗಾಮಿಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಜಿಲ್ಲಾ ಪರಿಷತ್ ಸದಸ್ಯರಿಗೆ ಗೌರವ ಧನ ನೀಡುವ ಪ್ರಸ್ತಾಪವನ್ನು ಕೈ ಬಿಡಲು ಕಾರಣವೇನು. ಜಿಲ್ಲಾ ಪರಿಷತ್ ಸದಸ್ಯರಿಗೆ ರೂ. ೫೦೦ ಮತ್ತು ಜಿಲ್ಲಾ ಪರಿಷತ್ ಸದಸ್ಯರು ಕೆಲವು ಸ್ಥಾಯೀ ಸಮಿತಿ ಸಭಾಪತಿಗಳಾದಲ್ಲಿ ಅವರಿಗೆ ರೂ. ೭೫೦ ನೀಡಲು ಕ್ರಮ ಕೈಗೊಳ್ಳಲಾಗುವುದೇ ?

ಆ) ಹಾಗಿಲ್ಲದಿದ್ದಲ್ಲಿ, ರಾಜ್ಯಾದ್ಯಂತ ಇರುವ ಬಡ ಜಿಲ್ಲಾ ಪರಿಷತ್ ಸದಸ್ಯರುಗಳು ತುಂಬಾ ತೊಂದರೆಗೀಡಾಗುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ರೀತಿ ಜಿಲ್ಲಾ ಪರಿಷತ್ ಸದಸ್ಯರಿಗೆ ಗೌರವ ಧನ ನೀಡಿದಲ್ಲಿ ಸರಕಾರದ ಬೊಕ್ಕಸಕ್ಕೆ ತಗಲುವ ವೆಚ್ಚ ಎಷ್ಟು ?

ಈ) ಜಿಲ್ಲಾ ಪರಿಷತ್ ಸದಸ್ಯರಿಗೆ ಉಚಿತವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿನಲ್ಲಿ ಪಾಸು ನೀಡಲಾಗುವುದೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು).—

ಅ) ಜಿಲ್ಲಾ ಪರಿಷತ್ ಸದಸ್ಯರುಗಳಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಮತ್ತು ಸಿಟ್ಟಿಂಗ್ ಫೀಗಳನ್ನು ಕಾನೂನಿನ ಪ್ರಕಾರ ಕೊಡುತ್ತಿರುವುದರಿಂದ ಸರ್ಕಾರವು ಅವರಿಗೆ ಗೌರವ ಧನವನ್ನು ಕೊಡುವುದು ಸೂಕ್ತವಲ್ಲವೆಂದು ತೀರ್ಮಾನಿಸಿದೆ.

ಆ) ಇಲ್ಲ